UNIVERSITY OF AGRICULTURAL SCIENCES, DHARWAD

ICAR - KRISHI VIGYAN KENDRA

SAIDAPUR FARM, DHARWAD -580 005

Newsletter

Volume: 15 Issue: 4 October-December, 2016

# International Soil Health Day & Rabi Campaign

On the eve of International Soil Health Day, Krishi Vigyan Kendra, University of Agricultural Sciences, Dharwad organized International Soil Health Day & Rabi Campaign on 05-12-2016 at KVK, Dharwad. Dr.B.S.Janagoudar,Hon'ble Director of Education, UAS, Dharwad inaugurated by watering the plant. In his inaugural address he stressed on importance of soil testing, soil health management and use of micronutrient. Sri Eshwarchandra Hosmani, Member, Board of Management, UAS, Dharwad, Sri T.S. Rudreshappa, Joint Director of Agriculture, Dharwad, Dr. Prakash Bhat, Programme Officer, SCOPE, Dharwad participated on the occasion.





Dr. V. I. Benagi, Director of Extension, UAS, Dharwad presided the function and in his presidential remark explained about soil health management and role of pulses in improving soil fertility. Dr.S.M.Mantur, Senior Scientist & Head, KVK, Dharwad gave an introductory speech on importance of celebrating international soil health day. A booklet on Rabi Crops was released by Dr. B.S. Janagoudar on this occasion. Soil health cards were distributed to the participated farmers and cheques were issued to the farmers who took up seed production in greengram under Seed Hub programme by the chief guests. Dr.B I Bidari , Dr. Prakash Bhat, Dr. B.M Radder , Dr. P. V Kenchangoudar, Dr. Ganajaxi K. Math and scientists from KVK participated as resource persons in the technical session. About 200 farmers/farmwomen from 28 villages of the district participated in the programme.



**An exhibition on soil health management rabi crops and millet crop production and value addition was arranged on the occasion.**



# Swacchata Pakhwada

KVK, Dharwad celebrated **Swacchata Pakhwada** from 16-31 October'2016 under Swachh Bharat Abhiyan programme. Under this programme KVK organized several training and awareness programmes for farmers and students for 15 days on various issues like farm waste management, cleanliness of the environment, parthenium management, etc.









## National Farmers Day



On the eve of Shri. Choudhari charan singh's birth anniversary "National Farmer's Day" was celebrated on 23.12.2016 at ICAR-KVK, Dharwad, University of Agricultural Sciences,Dharwad in collaboration with state Department of Agriculture, Dharwad.The program was inaugurated by Shri T. S. Rudreshappa, Joint Director of Agriculture, Dharwad by watering a plant. Dr. Y. B. Palled, Associate Director of Extension, UAS, Dharwad , Shri Umesh D, Deputy Director of Agriculture, Dharwad , Mr.Motebennur, Librarian, UAS, Dharwad and Shri Basavaraj Kundgol, President, Krishika Samaj ,Dharwad District graced the occasion.. Dr. V. I. Benagi, Director of Extension, UAS, Dharwad presided over the function and in his presidential remark said that farmers who have a scientific basis to their agricultural practices can only succeed. Farmer should practice integrated pest management, integrated nutrient management practices. Dr. S. M. Mantur,Senior Scientist and Head, KVK,Dharwad welcomed the guests and in his introductory remarks explained about technological week celebrated from 23-29 December 2016 by KVK, Dharwad as a part of Jai Kisan-Jai Vigyan program. About 50 farmers/farm women from the district participated in the programme.



## Technological Week under Jaikisan-Jaivigyan programme

As a part of Jaikisan-Jaivigyan programme KVK, Dharwad conducted Technological Week from 23-29 December' 2016. Various trainings on Protected cultivation for agricultural input dealers , little millet field day , Value addition and nutraceutical value of millets, rabi greengram pulse magic application production technology and improved cultivation practices in rabi sorghum, etc were arranged on the occassion. Dr. Sreenath Dixit, Director, ATARI (Zone-VIII), Bangalore and Dr. V. I. Benagi, Director of Extension, UAS, Dharwad participated in the valedictory function.









## World Food Day

World Food Day was celebrated on 17.10.2016 under the theme "Climate is changing, Food and Agriculture must too" at Kuruvinakoppa village of Dharwad district. Dr.V.I.Benagi , Director of Extension , UAS, Dharwad , Dr.S.M. Mantur, Senior Scientist and Head, KVK ,Dharwad, religious seer from Siddharudhamath, village leaders and scientists from KVK participated in the programme. About 250 farmers/farm women from nearby villages participated in the programme.



## Visit of Dr. Sreenath Dixit, Director, ATARI (Zone-VIII), Bengaluru

Dr. Sreenath Dixit, Director, ATARI (Zone-VIII), Bangalore and Dr. V. I. Benagi, Director of Extension, UAS, Dharwad visited KVK Dharwad on 29.12.2016 and visited wheat (DWR-162) certified seed production plots , cluster frontline demonstration fields of NFSM programme of rabi greengram variety Shreya (IPM 02-14) at Kuruvinakoppa village of Kalaghatgi taluka and interacted with the farmers and took feedback from them. He also visited progressive farmer and agricultural entrepreneur Shri Basavraj Hucchhayyanavar fields at Chikkamalligwad village of Dharwad taluk and observed large scale Vermicompost production unit, Silk worm rearing unit and IFS models established in his field. Dr. S. M. Mantur, Head, KVK, Dharwad and scientists of KVK accompanied him during the field visit.







# Training Programmes

## Advance Techniques in Vegetable Production and Post Harvest Management

A training on "Advance Techniques in Vegetable Production and Post Harvest Management" was arranged by KVK, Dharwad in association with National Horticulture Research and Development Federation,Hubli from 24-26 October'2016. Scientists from KVK, Dharwad Dr. S. M. Hiremath, Dr. S. P. Halagalimath, Smt.Vinutha U. Muktamath and Kum.Megha Raikar conducted training on crop production technology, plant protection, marketing and post harvest technology and also organized field visit to Hi-Tech Horticulture plots.









## World Fisheries Day and Training on Integrated Farming System



KVK, Dharwad celebrated International Fisheries Day on 21.11.2016 and conducted training on integrated farming System in association with SCOPE, Dharwad. Dr. V. I. Benagi, Director of Extension, UAS, Dharwad provided information on the importance of integrated farming system to farmers, Dr. Prakash Bhat, CEO,SCOPE gave training on weather based agriculture, Dr. Basavakumar talked on importance of rearing fish in farm ponds and Dr. Javed Mulla, Professor, UAS, Dharwad provided information on sheep and goat rearing. Dr.S.M.Mantur, KVK Head and scientists participated on the occasion.



# Field Days

### Paddy (Mugadh Sugandh)Field Day)

Field day on Paddy (Mugadh Sugandh) was organized on 6.11.2016 at Galagihulikoppa village.



### Little Millet(DHLM-36-3)Field Day)

On 24.12.2016 a field day was arranged at Guddadahulikatti village on little millet (DHLM-36-3).



## Award



Dr.S.M.Mantur, Senior Scientist and Head, KVK, Dharwad received the "Incentive Award" for mobilizing the funds through externally funded projects with a total outlay of more than Rs.25, 00,000/- And Dr.S.M. Hiremath, Scientist (Horticulture), KVK; Dharwad received the "Best Agriculture Extension Scientist Award. The award was received during the Foundation day of UAS, Dharwad on 01.10.2016 in the presence of Dr. D. P. Biradar, Hon'ble Vice-Chancellor, UAS,Dharwad, Dr. Ayyappan, Former Director General (ICAR), Dr.J.V.Gowd, Ex-Vice- Chancellor, UAS, Dharwad, Dr.B.S.Jangowdar , DOE, UAS,Dharwad and Shri Ishwar Chandra Hosmani, Member ,Board of Management, UAS, Dharwad.



## Visit to Taiwan by Dr. S. M. Mantur, Senior Scientist and Head, KVK , Dharwad



Dr. R.S. Giraddi, Dean (Agri.), College of Agriculture, Dharwad and Dr. S. M. Mantur, Senior Scientist and Head , KVK, Dharwad nominated as representatives of UAS, Dharwad, participated and presented research accomplishments of UAS, Dharwad with lead paper on "Innovations in millet production and value addition, protected cultivation and organic farming" in the Asia-Pacific Association of Agricultural Research Institutions (APAARI) Expert Consultation on "Best Practices in Agri Food Innovations in Asia and the Pacific" scheduled from 1-3 November 2016 held at Taichung, Taiwan. As Convener of working group on 'Value Added Partnership in Innovations', Dr. Giraddi presented the consolidated report. Dr. S. M. Mantur as Rapporteur for technical session on 'Capacity Development in Agri Food Innovations' and presented the recommendations of the session. They also visited World Vegetable Centre, Shanhua and visited Phalaenopsis Orchid Computer Controlled Ecology Green houses of Taiwan Orchid Growers Association at Tainan city. Besides, they visited Hong Kong University at Hong Kong on 5$^{th}$ November 2016 and had discussion with the university faculty.



## "Hydroponics: A soilless culture for urban agriculture" -Invited talk in the workshop




Dr. S. M. Mantur , Senior Scientist and Head , KVK , Dharwad was invited to deliver a talk in the National workshop on "**Hydroponics: A soil less culture for urban agriculture"** organized by Centre for Development of Advanced Computing (C-DAC), Mohali, Ministry of Electronics and IT, GoI on 19$^{th}$ December 2016 at Dr.Y.S.Parmar University of Horticulture and Forestry, Solan. In the workshop Dr. S. M. Mantur delivered a talk on "Opportunities in Hydroponics/Soilless Cultivation".

**Editor & Publisher** : **Dr. S. M. Mantur**
Senior Scientist and Head, ICAR-Krishi Vigyan Kendra, Dharwad

**Associate Editors** : **Smt. Vinutha U. Muktamath**, **Dr. S. M. Hiremath**, **Dr. S. P. Halagalimath**, **Ku. Megha Raikar**, **Shri C. J. Kumar**, **Smt. Jayalakshmi Hesurur**

**Type Setting and Design** : **Shri. Ulavappa Shivoji,** DTP Unit, Publicattion Center, UAS, Dharwad

**From,**
**Senior Scientist and Head**
**ICAR-Krishi Vigyan Kendra, Saidapur Farm**
**Dharwad -580 005 (Karnataka)**
**Telephone : 0836-2444272**
**E-mail : kvkdwd@uasd.in**
**Website : www.kvkdharwad.org**
**Facebook : Krishi Vigyan Kendra Dharwad**

**To,**

**Book Post**

**For free kisan mobile advisory services, please call 0836-2444272 / visit www.kvkdharwad.org for registration**

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ, ಧಾರವಾಡ -580 005
ವಾರ್ತಾ ಪತ್ರ

ಸಂಪುಟ: 15 ಸಂಚಿಕೆ: 4 ಅಕ್ಟೋಬರ್–ಡಿಸೆಂಬರ್, 2016

## "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಾಗೂ ಹಿಂಗಾರು ಕೃಷಿ ಆಂದೋಲನ"

ದಿನಾಂಕ: 05.12.2016 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಾಗೂ ಹಿಂಗಾರು ಕೃಷಿ ಆಂದೋಲನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಬಿ.ಎಸ್. ಜಾನಗೌಡರ್, ಮಾನ್ಯ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಸಸಿಗೆ ನೀರುಣಿಸುವ ಮೂಲಕ ನೆರವೇರಿಸಿದರು ಹಾಗೂ "ಹಿಂಗಾರು ಕೃಷಿ ಆಂದೋಲನ ತಾಂತ್ರಿಕ ಕೈಪಿಡಿ"ಯನ್ನು ಬಿಡುಗಡೆ ಮಾಡಿ ಮಣ್ಣು ಪರೀಕ್ಷೆಯ ಮಹತ್ವ ಮತ್ತು ಲಘುಪೋಷಕಾಂಶಗಳ ಬಳಕೆ ಕುರಿತು ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ. ಈಶ್ವರ ಚಂದ್ರ ಹೊಸಮನಿ, ಮಾನ್ಯ ಸದಸ್ಯರು, ವ್ಯವಸ್ಥಾಪನ ಮಂಡಳಿ, ಕೃವಿವಿ, ಧಾರವಾಡ ,ಶ್ರೀ. ಟಿ.ಎಸ್. ರುದ್ರೇಶಪ್ಪ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ, ಡಾ. ಪ್ರಕಾಶ ಭಟ್, ಕಾರ್ಯನಿರ್ವಾಹಕ ಅಧಿಕಾರಿಗಳು, ಸ್ಕೋಪ್ ಸಂಸ್ಥೆ, ಧಾರವಾಡ ಭಾಗಹಿಸಿದ್ದರು.





ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ವ್ಹಿ.ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ ಇವರು ಮೇಲ್ಮಣ್ಣಿನ ಸಂರಕ್ಷಣೆಯ ಮಹತ್ವ ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸುವಲ್ಲಿ ದ್ವಿದಳ ಧಾನ್ಯ ಬೆಳೆಗಳ ಪಾತ್ರ ಕುರಿತು ವಿವರಿಸಿದರು. ಡಾ. ಎಸ್.ಎಂ. ಮಂಟೂರು, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು , ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರು ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ಭಾಗವಹಿಸಿದ ರೈತರಿಗೆ ಮಣ್ಣು ಆರೋಗ್ಯ ಕಾರ್ಡ್ ವಿತರಣೆ ಹಾಗೂ ಸೀಡ್‌ಹಬ್ ಯೋಜನೆಯಡಿಯಲ್ಲಿ ಹೆಸರು ಬೀಜೋತ್ಪಾದನೆ ಮಾಡಿದ ರೈತರಿಗೆ ಚೆಕ್ ವಿತರಣೆಯನ್ನು ಮುಖ್ಯ ಅತಿಥಿಗಳು ನೆರವೇರಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ತಾಂತ್ರಿಕ ಸಮಾವೇಶದಲ್ಲಿ ಡಾ. ಬಿ.ಐ. ಬಿದರಿ, ಡಾ. ಪ್ರಕಾಶ ಭಟ್, ಡಾ. ಬಿ.ಎಂ. ರಡ್ಡೇರ, ಡಾ. ಗಣಜಾಕ್ಷಿ ಕೆ ಮಠ ಮತ್ತು ಕೇಂದ್ರದ ವಿಜ್ಞಾನಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ 05 ತಾಲೂಕಿನಿಂದ ಸುಮಾರು 28 ಗ್ರಾಮಗಳಿಂದ 200 ರೈತರು/ರೈತ ಮಹಿಳೆಯರು ಭಾಗವಹಿಸಿದ್ದರು.



ಇದೇ ಸಂಧರ್ಭದಲ್ಲಿ ರೈತರಿಗೆ ಮಣ್ಣು ಆರೋಗ್ಯ, ಹಿಂಗಾರಿ ಬೆಳೆಗಳು ಮತ್ತು ಸಿರಿಧಾನ್ಯಗಳ ಉತ್ಪಾದನೆ ಹಾಗೂ ಮೌಲ್ಯವರ್ಧನೆ ಕುರಿತು ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು



## ಸ್ವಚ್ಚತಾ ಪಾಕ್ಷಿಕ

ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ದಿನಾಂಕ 16 ರಿಂದ 31 ಅಕ್ಟೊಬರ್ 2016 ರವರೆಗೆ ಸ್ವಚ್ಚ ಭಾರತ ಅಭಿಯಾನದಡಿಯಲ್ಲಿ ಸ್ವಚ್ಚತಾ ಪಾಕ್ಷಿಕವನ್ನು ಆಚರಿಸಲಾಯಿತು. ಇದರ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರದಲ್ಲಿ , ಗ್ರಾಮಗಳಲ್ಲಿ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ 15 ದಿನಗಳ ಕಾಲ ಸ್ವಚ್ಚತೆ ಕುರಿತು ತಿಳುವಳಿಕೆ ಕಾರ್ಯಕ್ರಮಗಳು, ಕೃಷಿ ತ್ಯಾಜ್ಯ ವಸ್ತುಗಳ ನಿರ್ವಹಣೆ , ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು , ಪಾರ್ಥೇನಿಯಂ ನಿರ್ವಹಣೆ ಇತ್ಯಾದಿ ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.










## ರಾಷ್ಟ್ರೀಯ ಕೃಷಿಕರ ದಿನಾಚರಣೆ



ಚೌಧರಿ ಚರಣ ಸಿಂಗ ಜನ್ಮ ದಿನಾಚರಣೆ ಅಂಗವಾಗಿ ದಿನಾಂಕ: 23.12.2016 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ **" ರಾಷ್ಟ್ರೀಯ ಕೃಷಿಕರ ದಿನಾಚರಣೆ"** ಯನ್ನು ಕೃಷಿ ಇಲಾಖೆ, ಧಾರವಾಡ ಇವರ ಸಹಯೋಗದೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಿ.ಎಸ್. ರುದ್ರೇಶಪ್ಪ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ ಇವರು ಸಸಿಗೆ ನೀರುಣಿಸುವ ಮೂಲಕ ನೆರವೇರಿಸಿ ,ತಮ್ಮ ಉದ್ಘಾಟನಾ ಭಾಷಣದಲ್ಲಿ ರೈತರ ಮನೆಬಾಗಿಲಿಗೆ ಸರ್ಕಾರವು ಹಲವು ಕಾರ್ಯಕ್ರಮ ತಂದಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಡಾ. ವೈ.ಎಸ್. ಪಲ್ಲೇದ, ಸಹ ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ,ಶ್ರೀ. ಉಮೇಶ ಡಿ, ಉಪನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ ವಿಶ್ವವಿದ್ಯಾಲಯದ ಗ್ರಂಥಪಾಲಕರಾದ ಡಾ. ಮೋಟೆಬೆನ್ನೂರು ,ಶ್ರೀ ಬಸವರಾಜ ಕುಂದಗೋಳ, ಅಧ್ಯಕ್ಷರು, ಕೃಷಿಕ ಸಮಾಜ, ಧಾರವಾಡ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ವ್ಹಿ.ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ ಇವರು ಜವಾನರು ನಮ್ಮ ದೇಶವನ್ನು ರಕ್ಷಣೆ ಮಾಡಿದರೆ ರೈತರು ನಮ್ಮ ಜೀವನವನ್ನು ಕಾಪಾಡುತ್ತಾರೆ. ರೈತರು ಯಶಸ್ವಿಯಾಗಬೇಕಾದರೆ ಅವನಿಗೆ ವಿಜ್ಞಾನದ ತಳಹದಿ ಬೇಕು ಎಂದು ವಿವರಿಸುತ್ತಾ ಸಮಗ್ರ ಕೀಟ ರೋಗ ನಿರ್ವಹಣೆ, ಸಮಗ್ರ ಕೃಷಿ ಪದ್ಧತಿ, ಕೃಷಿ ಯಾಂತ್ರಿಕರಣದ ಅಳವಡಿಕೆ ಮಹತ್ವ ತಿಳಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ಮತ್ತು ರೈತ ಬಾಂಧವರನ್ನು ಡಾ. ಎಸ್.ಎಂ. ಮಂಟೂರು, ಕೇಂದ್ರದ ಮುಖ್ಯಸ್ಥರುಸ್ವಾಗತಿಸಿ, ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ **ಜೈ ಜವಾನ ಜೈ** ವಿಜ್ಞಾನ ಕಾರ್ಯಕ್ರಮದ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ದಿ: 23–29 ಡಿಸೆಂಬರ್ 2016 ರವರೆಗೆ ಹಮ್ಮಿಕೊಂಡಿರುವ ಕೃಷಿ ತಂತ್ರಜ್ಞಾನ ಸಪ್ತಾಹ ಕಾರ್ಯಕ್ರಮದ ವಿವರವನ್ನು ವಿಸ್ತಾರವಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲೆಯ 50 ರೈತರು/ರೈತ ಮಹಿಳೆಯರು ಭಾಗವಹಿಸಿದ್ದರು.



## ಜೈಕಿಸಾನ-ಜೈವಿಜ್ಞಾನ ಅಂಗವಾಗಿ ಕೃಷಿ ತಂತ್ರಜ್ಞಾನ ಸಪ್ತಾಹ

ಜೈ ಜವಾನ ಜೈ ವಿಜ್ಞಾನ ಕಾರ್ಯಕ್ರಮದ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ದಿ: 23–29 ಡಿಸೆಂಬರ್ 2016 ರವರೆಗೆ ಕೃಷಿ ತಂತ್ರಜ್ಞಾನ ಸಪ್ತಾಹವನ್ನು ಆಚರಿಸಿತು. ಈ ಸಂಧರ್ಭದಲ್ಲಿ ಕೃಷಿ ಪರಿಕರಗಳ ಮಾರಾಟಗಾರರಿಗೆ ಸಂರಕ್ಷಿತ ಕೃಷಿ ತರಬೇತಿ, ಸಾವೆ ಬೆಳೆ ಕ್ಷೇತ್ರೋತ್ಸವ ಹಾಗೂ ಮೌಲ್ಯವರ್ಧನೆ , ಹಿಂಗಾರು ಹೆಸರು ಬೆಳೆ ಬೇಸಾಯ ಹಾಗೂ ಪಲ್ಸ್ ಮ್ಯಾಜಿಕ್ ಸಿಂಪರಣೆಯ ಪ್ರಾತ್ಯಕ್ಷಿಕೆ , ಸ್ವಸಹಾಯ ಸಂಘದ ಗುಂಪಿನ ಮಹಿಳಾ ಸದಸ್ಯರುಗಳಿಗೆ ಸಿರಿಧಾನ್ಯಗಳ ಮೌಲ್ಯವರ್ಧನೆಯ ಕುರಿತು ತರಬೇತಿ, ಹಿಂಗಾರು ಜೋಳದ ಸುಧಾರಿತ ಬೇಸಾಯ ಕ್ರಮಗಳು , ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು






## ವಿಶ್ವ ಆಹಾರ ದಿನಾಚರಣೆ



ದಿನಾಂಕ 17.10.2016 ರಂದು **ಕುರುವಿನಕೊಪ್ಪ ಗ್ರಾಮದಲ್ಲಿ ವಿಶ್ವ ಆಹಾರ ದಿನಾಚರಣೆಯನು "ಹವಾಮಾನ ಬದಲಾಗುತ್ತಿದೆ : ಆಹಾರ ಮತ್ತು ಕೃಷಿ ಕೂಡಾ ಬದಲಾಗಬೇಕು"** ಎಂಬ ಧ್ಯೇಯದೊಂದಿಗೆ ಆಚರಿಸಲಾಯಿತು.. ಈ ಸಂಧರ್ಭದಲ್ಲಿ ಡಾ. ವ್ಹಿ.ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ, ಡಾ. ಎಸ್.ಎಂ. ಮಂಟೂರು, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ,ಸ್ಥಳೀಯ ಸಿದ್ಧರೂಢಮಠದ ಸ್ವಾಮಿಗಳು ಮತ್ತು ಗ್ರಾಮದ ಮುಖ್ಯಸ್ಥರು ಹಾಗೂ ಕೇಂದ್ರದ ವಿಜ್ಞಾನಿಗಳು ಪಾಲ್ಗೊಂಡಿದ್ದರು. ಕುರುವಿನಕೊಪ್ಪ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸುಮಾರು 250 ರೈತರು/ರೈತ ಮಹಿಳೆಯರು ಭಾಗವಹಿಸಿದ್ದರು.

## ನಿರ್ದೇಶಕರು , ಕೃಷಿ ತಂತ್ರಜ್ಞಾನ ಅಳವಡಿಕೆ ಮತ್ತು ಸಂಶೋಧನಾ ಸಂಸ್ಥೆ , ಬೆಂಗಳೂರು ಇವರ ಭೇಟಿ

ದಿನಾಂಕ 29.12.2016 ರಂದು ಡಾ.ಶ್ರೀನಾಥ ಧೀಕ್ಷಿತ್ , ನಿರ್ದೇಶಕರು , ಕೃಷಿ ತಂತ್ರಜ್ಞಾನ ಅಳವಡಿಕೆ ಮತ್ತು ಸಂಶೋಧನಾ ಸಂಸ್ಥೆ , ಬೆಂಗಳೂರು ಇವರು ಕೃಷಿ ವಿಜ್ಞಾನ ಕೇಂದ್ರ, ಧಾರವಾಡಕ್ಕೆ ಭೇಟಿ ನೀಡಿ ಹಿಂಗಾರಿ ಹಂಗಾಮಿನಲ್ಲಿ ಕೈಗೊಂಡ ಗೋದಿ ಬೀಜೋತ್ಪಾದನಾ ಕ್ಷೇತ, ರಾಷ್ಟ್ರೀಯ ಆಹಾರ ಭದ್ರತಾ ಯೋಜನಾ ಯೋಜನೆ ಅಡಿಯಲ್ಲಿ ರೈತರ ಕ್ಷೇತ್ರಗಳಲ್ಲಿ ಕೈಗೊಂಡ ಹೆಸರು ಬೆಳೆಯ ಬೀಜೋತ್ಪಾದನೆ ಮತ್ತು ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು. ಇದೇ ಸಂಧರ್ಭದಲ್ಲಿ ಚಿಕ್ಕಮಲ್ಲಿಗವಾಡ ಗ್ರಾಮದ ಪ್ರಗತಿಪರ ರೈತರಾದ ಶ್ರೀ.ಬಸವರಾಜ ಹುಚ್ಚಯ್ಯನವರ್ ಇವರ ಕ್ಷೇತ್ರಕ್ಕೆ ಭೇಟಿ ನೀಡಿ ದೊಡ್ಡ ಪ್ರಮಾಣದಲ್ಲಿ ಕೈಗೊಂಡ ಎರೆಗೊಬ್ಬರ ಘಟಕ , ರೇಷ್ಮೆ ಘಟಕ ಹಾಗೂ ಸಮಗ್ರ ಕೃಷಿ ಪದ್ಧತಿ ಅಳವಡಿಸಿದ ತಾಕುಗಳನ್ನು ವೀಕ್ಷಿಸಿದರು. ಡಾ. ವ್ಹಿ.ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ ಮತ್ತು ಡಾ. ಎಸ್.ಎಂ. ಮಂಟೂರು, ಕೇಂದ್ರದ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರು ಈ ಸಂಧರ್ಭದಲ್ಲಿ ಉಪಸ್ಥಿತರಿದ್ದರು.







# ತರಬೇತಿ ಕಾರ್ಯಕ್ರಮಗಳು

## ಸುಧಾರಿತ ತರಕಾರಿ ಕೃಷಿ ಹಾಗೂ ಕೋಯ್ಲೋತ್ತರ ನಿರ್ವಹಣೆ ಕುರಿತು ತರಬೇತಿ

ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ದಿನಾಂಕ 24 ರಿಂದ 26 ಅಕ್ಟೊಬರ್ 2016 ರಂದು ರಾಷ್ಟ್ರೀಯ ತೋಟಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ, ಹುಬ್ಬಳ್ಳಿ ಇವರ ಸಹಯೋಗದೊಂದಿಗೆ ಸುಧಾರಿತ ತರಕಾರಿ ಕೃಷಿ ಹಾಗೂ ಕೋಯ್ಲೋತ್ತರ ನಿರ್ವಹಣೆ ಬಗ್ಗೆ ರೈತರ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ **ವಿಜ್ಞಾನಿಗಳಾದ ಡಾ.ಎಸ್.ಎಂ. ಹಿರೇಮಠ, ಡಾ. ಎಸ್. ಪಿ. ಹಲಗಲಿಮಠ, ಶ್ರೀಮತಿ. ವಿನುತಾ ಎನ್. ಮುಕ್ತಾಮಠ ಹಾಗೂ ಕುಮಾರಿ ಮೇಘಾ ರಾಯ್ಕರ** ಇವರು ವಿವಿಧ ಬೆಳೆಗಳಲ್ಲಿ ಅಳವಡಿಸಬೇಕಾದ ಸುಧಾರಿತ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿ ಕ್ಷೇತ್ರ ವೀಕ್ಷಣೆ ಮಾಡಿದರು.






## ಸಮಗ್ರ ಕೃಷಿ ಪದ್ಧತಿ ಚಟುವಟಿಕೆ ಕುರಿತು ತರಬೇತಿ ಹಾಗೂ ವಿಶ್ವ ಮೀನುಗಾರಿಕೆ ದಿನಾಚರಣೆ



ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ದಿನಾಂಕ 21.11.2016 ರಂದು **ಸ್ಕೋಪ್ ಸಂಸ್ಥೆ ಇವರ ಸಹಯೋಗದೊಂದಿಗೆ ಸಮಗ್ರ ಕೃಷಿ ಪದ್ಧತಿ ಚಟುವಟಿಕೆ ಕುರಿತು ತರಬೇತಿ ಹಾಗೂ** ವಿಶ್ವ ಮೀನುಗಾರಿಕೆ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಡಾ. ವ್ಹಿ.ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ **ಸಮಗ್ರ ಕೃಷಿ ಪದ್ಧತಿಯ ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡಿದರು.** ಡಾ. ಪ್ರಕಾಶ ಭಟ್, ಕಾರ್ಯ ನಿರ್ವಾಹಕ ಅಧಿಕಾರಿಗಳು, ಸ್ಕೋಪ್ ಸಂಸ್ಥೆ, ಧಾರವಾಡ ಇವರು ಹವಾಮಾನ ಆಧರಿತ ಕೃಷಿ ಕುರಿತು ತರಬೇತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ಧ ವಿಶ್ವವಿದ್ಯಾಲಯದ ಮೀನುಗಾರಿಕೆ ತಜ್ಞರಾದ ಡಾ.ಕೆ.ವಿ.ಬಸವಕುಮಾರ ಇವರು ಮೀನು ಸಾಕಾಣಿಕೆಯಿಂದ ಆರ್ಥಿಕ ಲಾಭ ಗಳಿಸುವ ಬಗೆಯನ್ನು ರೈತರಿಗೆ ತಿಳಿಸಿದರು. **ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ಡಾ.ಜಾವೇದ್ ಮುಲ್ಲಾ, ಪ್ರಾಧ್ಯಾಪಕರು, ಕೃ.ವಿ.ವಿ,ಧಾರವಾಡ ಇವರು ಮಾಹಿತಿ ನೀಡಿದರು.** ಡಾ. ಎಸ್. ಎಂ. ಮಂಟೂರು, ಕೇಂದ್ರದ ಮುಖ್ಯಸ್ಥರು **ಹಾಗೂ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ್ದರು.**



# ಕ್ಷೇತ್ರೋತ್ಸವ

## ಮುಗದ ಸುಗಂಧ ಭತ್ತದ ಕ್ಷೇತ್ರೋತ್ಸವ



ದಿನಾಂಕ 6.11.2016 ರಂದು ಗಳಗಿಹುಲಿಕೊಪ್ಪಾ ಗ್ರಾಮದಲ್ಲಿ ಮುಗದ ಸುಗಂಧ ಭತ್ತದ ಕ್ಷೇತ್ರೋತ್ಸವ ಆಚರಿಸಲಾಯಿತು.

## ಸಾವೆ ಬೆಳೆಯ ಕ್ಷೇತ್ರೋತ್ಸವ



ದಿನಾಂಕ 24.12.2016 ರಂದು ಗುಡ್ಡದಹುಲಿಕಟ್ಟಿ ಗ್ರಾಮದಲ್ಲಿ ಸಾವೆ(ಡಿ.ಎಚ್.ಎಲ್.ಎಂ–36–3) ಬೆಳೆಯ ಕ್ಷೇತ್ರೋತ್ಸವ ಆಚರಿಸಲಾಯಿತು.



## ಪ್ರಶಸ್ತಿ ಪ್ರಧಾನ



ಡಾ. ಎಸ್.ಎಂ. ಮಂಟೂರು, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಇವರಿಗೆ 2014–15 ನೇ ಸಾಲಿನಲ್ಲಿ ರೂ. 25 ಲಕ್ಷಗಳಿಗಿಂತ ಹೆಚ್ಚು ಮೊತ್ತದ ಬಾಹ್ಯ ಪ್ರಾಯೋಜಿತ ಸಂಶೋಧನಾ ಯೋಜನೆಗಳನ್ನು ತಂದಿದಕ್ಕಾಗಿ ರೂ. 5000/– ಗಳ ನಗದು ಪ್ರೋತ್ಸಾಹ ಧನ ಹಾಗೂ "ಪ್ರೋತ್ಸಾಹಕ ಪ್ರಶಸ್ತಿ" ಯನ್ನು ದಿನಾಂಕ 1.10.2016 ರಂದು ನಡೆದ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನದಂದು ಡಾ.ಡಿ.ಪಿ.ಬಿರಾದರ್, ಮಾನ್ಯ ಕುಲಪತಿಗಳು,ಕೃ.ವಿ.ವಿ,ಧಾರವಾಡ, ಡಾ.ಅಯ್ಯಪ್ಪನ್, ನಿಕಟ ಪೂರ್ವ ಡೈರಕರ್ ಜೆನರಲ್ (ಐ.ಸಿ.ಎ.ಆರ್) ಮತ್ತು ಡಾ.ಜೆ.ವಿ.ಗೌಡ, ಮಾಜಿ ಕುಲಪತಿಗಳು, ಕೃ.ವಿ.ವಿ,ಧಾರವಾಡ ಇವರ ಸಮ್ಮುಖದಲ್ಲಿ ಪ್ರಧಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ **ಡಾ.ಎಸ್.ಎಂ. ಹಿರೇಮಠ**, ವಿಜ್ಞಾನಿಗಳು (ತೋಟಗಾರಿಕೆ), ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಇವರಿಗೆ 2014–15 ನೇ ಸಾಲಿನಲ್ಲಿ ವಿಸ್ತರಣಾ ಕಾರ್ಯ ಚಟುವಟಿಕೆಗಳನ್ನು ಪರಿಗಣಿಸಿ "ಅತ್ಯುತ್ತಮ ವಿಸ್ತರಣಾ ವಿಜ್ಞಾನಿ ಪ್ರಶಸ್ತಿ" ಹಾಗೂ ರೂ. 5000/– ಗಳ ನಗದು ಪ್ರೋತ್ಸಾಹ ಧನ ಪ್ರಧಾನ ಮಾಡಲಾಯಿತು.



## ಡಾ. ಎಸ್.ಎಮ್. ಮಂಟೂರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರ ತೈವಾನ್ ಭೇಟಿ



ಡಾ. ಆರ್.ಎಸ್. ಗಿರಡ್ಡಿ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಕೃ.ವಿ.ವಿ, ಧಾರವಾಡ ಹಾಗೂ ಡಾ. ಎಸ್.ಎಮ್. ಮಂಟೂರ, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೃ.ವಿ.ವಿ, ಧಾರವಾಡ ಇವರು ಟೈಚುಂಗ್, ಟೈವಾನ್‌ದಲ್ಲಿ 1–3,ನವೆಂಬರ್, 2016ರ ವರೆಗೆ , ಏಷ್ಯಾ–ಪೆಸಿಫಿಕ್ ಅಸೋಸಿಯೇಶನ್‌ನ ಕೃಷಿ ಸಂಶೋಧನಾ ಸಂಸ್ಥೆ (APAARI) ಇವರು "ಏಷಿಯ ಮತ್ತು ಫೆಸಿಫಿಕ್ ಪ್ರದೇಶಗಳಲ್ಲಿ ಕೃಷಿ ಆಹಾರಗಳ ನವೀನ ಆವಿಷ್ಕಾರಗಳಲ್ಲಿ ಅತ್ಯುತ್ತಮ ಆಚರಣೆಗಳು"ಕುರಿತು ನೆಡೆಸಿದ ಎಕ್ಸ್ಪರ್ಟ ಕನ್ಸಲ್ಟೇಶನ್‌ನಲ್ಲಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ನಾಮನಿರ್ದೇಶನ ಮಾಡಿದ ಪ್ರತಿನಿಧಿಗಳಾಗಿ ಭಾಗವಹಿಸಿ ಕೃ.ವಿ.ವಿ, ಧಾರವಾಡದ ಸಂಶೋಧನಾ ಸಾಧನೆಗಳನ್ನು "ಸಿರಿಧಾನ್ಯ ಉತ್ಪಾದನೆ , ಮೌಲ್ಯವರ್ಧನೆ ಹಾಗೂ ಸಂರಕ್ಷಿತ ಮತ್ತು ಸಾವಯವ ಕೃಷಿಯಲ್ಲಿ ಕೈಗೊಂಡ ಅವಿಷ್ಕಾರಗಳು" ಎಂಬ ಪ್ರಮುಖ(lead) ವೈಜ್ಞಾನಿಕ ಲೇಖನ ಮಂಡಿಸಿದರು. ಈ ಸಂಧರ್ಭದಲ್ಲಿ ಕಾರ್ಯಕಾರಿ ಗುಂಪಿನ ಸಂಚಾಲಕರಾಗಿ ಕಾರ್ಯನಿರ್ವಹಿಸಿದ ಡಾ. ಗಿರಡ್ಡಿಯವರು "ಆವಿಷ್ಕಾರಗಳಲ್ಲಿ ಮೌಲ್ಯಯುತ ಸಹಭಾಗಿತ್ವ" ಕುರಿತು ವಿಚಾರ ಮಂಥನದ ವರದಿಯನ್ನು ಅಪಾರಿ ಕಾಂಗ್ರೆಸ್‌ನಲ್ಲಿ ಮಂಡಿಸಿದರು.. ಡಾ. ಮಂಟೂರ ಅವರು "ಕೃಷಿ–ಆಹಾರ ಆವಿಷ್ಕಾರಗಳಲ್ಲಿ ಸಾಮರ್ಥ್ಯದ ಬೆಳವಣಿಗೆಯ ತಾಂತ್ರಿಕ ಸಭೆಯ ರ‍್ಯಾಪೋರ್ಟಿಯರ್ ಆಗಿ ಕಾರ್ಯನಿರ್ವಹಿಸಿ ವರದಿ ಮಂಡಿಸಿದರು. ಇದೇ ಸಂಧರ್ಭದಲ್ಲಿ ಇವರು ಅಂತರಾಷ್ಟ್ರೀಯ ತರಕಾರಿ ಬೇಳೆಗಳ ಕೇಂದ್ರ, ಶಾನಹೂ ತೈವಾನ್ ಆರ್ಕಿಡ್ ಬೆಳೆಗಾರರ ಸಂಘದ ಹಸಿರು ಮನೆಗಳು, ತೈವಾನ್ ಹಾಗೂ ಹಾಂಗ್ ಕಾಂಗ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ವಿಚಾರ ವಿನಿಮಯ ಮಾಡಿದರು.



## "ಹೈಡ್ರೋಪೋನಿಕ್ಸ: ಮಣ್ಣು ರಹಿತ ನಗರ ಕೃಷಿ" ಕಾರ್ಯಗಾರ




ಡಾ. ಎಸ್. ಎಮ್. ಮಂಟೂರ, ಹಿರಿಯ ವಿಜ್ಞಾನಿಗಳು & ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರು ದಿನಾಂಕ 19.12.2016 ರಂದು ಡೆವಲಪಮೆಂಟ್ ಆಫ್ ಎಡ್ವಾನ್ಸಡ್ ಕಂಪ್ಯೂಟಿಂಗ್ (C-DAC), ಮೋಹಾಲಿ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಡಾ.ವ್ಹಾಯ್. ಎಸ್. ಪಾರಮರ್ ತೋಟಗಾರಿಕೆ ಮತ್ತು ಅರಣ್ಯ ವಿಶ್ವವಿದ್ಯಾಲಯ, ಸೋಲನನಲ್ಲಿ ಆಯೋಜಿಸಲಾದ "ಹೈಡ್ರೋಪೊನಿಕ್ಸ: ಮಣ್ಣು ರಹಿತ ನಗರ ಕೃಷಿ" ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅವರು  ಹೈಡ್ರೋಪೊನಿಕ್ಸ (ಮಣ್ಣು ರಹಿತ ಕೃಷಿ) ಇದರ ಅವಕಾಶಗಳು ಮತ್ತು ಮಹತ್ವದ ಬಗ್ಗೆ ಮಾಹಿತಿಯನ್ನು ನೀಡಿದರು.


| | | | |
|---|---|---|---|
| **ಸಂಪಾದಕರು ಹಾಗೂ ಪ್ರಕಾಶಕರು** | : | **ಡಾ. ಎಸ್. ಎಮ್. ಮಂಟೂರ** | |
| | | ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಧಾರವಾಡ | |
| **ಸಹ ಸಂಪಾದಕರು** | : | ಶ್ರೀಮತಿ ವಿನುತಾ ಯು. ಮುಕ್ತಾಮಠ | ಡಾ. ಎಸ್. ಎಮ್. ಹಿರೇಮಠ |
| | | ಡಾ. ಎಸ್. ಪಿ. ಹಲಗಲಿಮಠ | ಕು. ಮೇಘಾ ರಾಯ್ಕರ್ |
| | | ಶ್ರೀ. ಸಿ. ಜೆ. ಕುಮಾರ | ಶ್ರೀಮತಿ ಜಯಲಕ್ಷ್ಮಿ ಹೆಸರೂರು |
| **ಅಕ್ಷರ ಜೋಡಣೆ ಮತ್ತು ವಿನ್ಯಾಸ** | : | ಶ್ರೀ ಉಳವಪ್ಪ ಶಿವೋಜಿ, ಡಿಟಿಪಿ ಘಟಕ, ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ | |



**ಇಂದ,**

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836–2444272
ಮಿಂಚಂಚೆ : kvkdwd@uasd.in
ವೆಬ್‌ಸೈಟ್ : www.kvkdharwad.org
ಫೇಸ್‌ಬುಕ್ : Krishi Vigyan Kendra Dharwad


**ಗೆ,**

__________

**ತೆರೆದ ಅಂಚೆ**

**ಉಚಿತ ಕೃಷಿ ಸಂದೇಶಗಳಿಗಾಗಿ ದೂರವಾಣಿ ಸಂಖ್ಯೆ:0836–2444272ಗೆ ಕರೆಮಾಡಿ / www.kvkdharwad.org ವೆಬ್‌ಸೈಟ್‌ನಿಂದ ನೋಂದಣಿ ಮಾಡಿ**

